೩) ಕನ್ನಡ ಸಾಹಿತ್ಯ ಪರಿಷತ್ತಿಗೆ ನೇಮಿಸಲಾಗಿರುವ ಸರ್ಕಾರಿ ಅಧಿಕಾರಿಗಳನ್ನು ವಾಪಸ್ ಕರೆಯಿಸಲು ಒತ್ತಾಯ.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ,

ಕನ್ನಡಿಗರ ಕನ್ನಡ ಸಾಹಿತ್ಯ ಪರಿಷತ್ತು
ಹಿಂದೆ ವಿಶೇಷ ಕೀರ್ತಿಯ ಗಳಿಸಿತ್ತು
ಈಗೀಗ ಅಲ್ಲಿ ನಡೆಯಿತು ಕಸರತ್ತು
ಜೊತೆಗೆ ಗುಂಪುಗಾರಿಕೆಯ ವಂಸಲತ್ತು

ಡಿ.ವಿ.ಜಿ. ಮಾಸ್ತಿ, ಬಿ ಎಂ. ಶ್ರೀ ಅಲ್ಲದೆ ಮತ್ತು
ನೂರಾರು ಸಾಹಿತಿ ಕವಿಗಳ ಶ್ರಮವಿತ್ತು
ಆ-ರೀತಿ ಸಾಹಿತಿಗಳ ಶಕ್ತಿಯಾಗಿ ಬೆಳೆದಿತ್ತು
ನಿಜಕ್ಕೂ ಕನ್ನಡಿಗರಿಗದು ಗೌರವ ತಂದಿತ್ತು

ಆದರೆ ಪರಿಷತ್ತಿಗೆ ಈಗ ಬಂದಿದೆ ಕುತ್ತ
ಘನತೆ ಗೌರವ ಎಲ್ಲವೂ ಕೆಳಗಡೆ ಬಿತ್ತು
ಆರಿಸಿ ಬಂದ ಅಧ್ಯಕ್ಷಗ ವಜಾ ಆಗಿತ್ತು
ಇದು ಸಾಹಿತ್ಯ ಲೋಕಕೆ ತಂದಿದೆ ಆಪತ್ತು

ಅಧ್ಯಕ್ಷರ ಕೆಳಗಿಳಿಸಿ ಸರಕಾರ ಅಧಿಕಾರ ಪಡಿತು
ಸರಕಾರದ ಅಧಿಕಾರಿಯು ಆಡಳಿತ ಬಂದಿತ್ತು
ಕನ್ನಡ ಸಾಹಿತ್ಯ ಪರಿಷತ್ತಿಗಿದು ಭಾರೀ ವಿಪತ್ತು
ಕೆಳಗಿಳಿಯಿತೆಂ ಸಾಹಿತ್ಯ ಕ್ಷೇತ್ರದ ದೌಲತ್ತು

ಇನ್ನಾದರೂ ಚುನಾಯಿತ ಅಧ್ಯಕ್ಷರ ಮಾಡುವಿರಾ ?
ಸಹಕಾರಿ ಅಧಿಕಾರಿಯ ವಾಪಸ್ಸು ಕರೆಸುವಿರಾ ?
ಕನ್ನಡ ಸಾಹಿತ್ಯ ಪರಿಷತ್ತಿನ ಬಿಕ್ಕಟ್ಟನ್ನು ತಿಳಿಸುವಿರಾ ?
ಕನ್ನಡ ಸಂಸ್ಕೃತಿ ಸಚಿವರು ವಿಷಯ ವಿವರಿಸುವಿರಾ ?

ಇದೋ ಗಮನ ಸೆಳೆಯುವೆ ಉತ್ತರಿಸುವಿರಾ,

ಶ್ರೀ ಎ. ಲಕ್ಷ್ಮೀಸಾಗರ್.—ಬಹಳ ದಿನಗಳಿಂದ ಸರಕಾರದ ಗಮನಸೆಳೆದಿದ್ದಾರೆ. ಈಗ ಈ ವ್ಯವಹಾರ ಕೋರ್ಟಿನಲ್ಲಿದೆ. ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದೇವೆ ಅವರು ಕ್ರಮ ತೆಗೆದು ಕೊಳ್ಳುತ್ತಾರೆ. ಆದಷ್ಟು ಬೇಗ ಚುನಾವಣೆ ನಡೆಸಬೇಕೆಂದು ಸರಕಾರದ ಅಭಿಪ್ರಾಯ ಆದ್ದರಿಂದ ಮಾನ್ಯ ಇದಿನಬ್ಬನವರ ತೀವ್ರತೆಯನ್ನು ಸರಕಾರ ಗಮನಿಸಿ ಕಾನೂನಿನ ಚೌಕಟ್ಟಿನಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅದನ್ನು ತೆಗೆದುಕೊಳ್ಳುತ್ತೇವೆ.

೪) ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳಿಗೆ ವಿದ್ಯಾರ್ಜನೆಗೆ ಪ್ರೋತ್ಸಾಹ ನೀಡಲು ಒತ್ತಾಯ.

ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ದುರದೃಷ್ಟಕರವಾದ ಸಾಮಾಜಿಕ ವ್ಯವಸ್ಥೆಯಲ್ಲಿ, ದುರ್ಬಲ ವರ್ಗಕ್ಕೆ ಸೇರಿದ ಬಡವರಾದ, ಕೂಲಿಕಾರರಾದ, ಅವಿದ್ಯಾವಂತರಾದ ಹಿಂದುಳಿದ ಜನಾಂಗದವರು ತಮ್ಮ ಮಕ್ಕಳನ್ನು ಹೈಸ್ಕೂಲಿಗೆ ಕಳುಹಿಸಿ, ವಿದ್ಯೆ ನೀಡಲಂ ಪರಿಶ್ರಮಿಸುತ್ತಿರುವುದು ಪ್ರಶಂಸನೀಯ. ಆದರೆ, ಯಾವುದೇ ಶೈಕ್ಷಣಿಕ ಹಿನ್ನೆಲೆಯಿಲ್ಲದ ಆ ಮಕ್ಕಳು ತಂತ್ರ ಗಂಜಿಗೂ ಪರದಾಡುವ ಕುಟುಂಬದಲ್ಲಿ ಹುಟ್ಟಿ, ಹಾಲು-ಬೆಣ್ಣೆ-ಬ್ರೆಡ್ಡುಗಳ ಮುಖವನ್ನೇ ಕಾಣದೆ ಜೀವ ಸತ್ವಗಳ ಕೊರತೆಯಿಂದ ದೈಹಿಕವಾಗಿಯೂ ಬೌದ್ಧಿಕವಾಗಿಯೂ ಬಸವಳಿದು, ಕೈಲಾಗ ದಿರುವುದು ತೀರಾ ಸಾಮಾನ್ಯ. ಫೇಲಾದ ಮಕ್ಕಳಿಗೆ ತಮ್ಮ ವಿದ್ಯಾಭ್ಯಾಸವನ್ನು ಅದೇ ತರಗತಿಯಲ್ಲಿ